**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**

**ಸಾಃಗೋಕಾಕ**

ಸಿ.ಸಿ. ನಂಬರಃ **2822/2018**

**ದಿಃ 03-12-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಸಿಡಬ್ಲೂಃ 1 ಪಿಡಬ್ಲೂಃ 1

| | | |
|---|---|---|
| ಹೆಸರು | : | ರಾವಸಾಬ ಸಿದ್ಲಿಂಗಪ್ಪಾ ಜಗದಾಳೆ |
| ತಂದೆಯ ಹೆಸರು | : | ಸಿದ್ಲಿಂಗಪ್ಪಾ ಜಗದಾಳೆ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಕೌಜಲಗಿ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1 ರಿಂದ 4 ನೇ ಆರೋಪಿತರ ಪರಿಚಯವಿದೆ. ಚಾಸಾ-2, 3 ರವರ ಪರಿಚಯವಿದೆ. ಚಾಸಾ-3 ರವರು ಮೃತಪಟ್ಟಿರುತ್ತಾರೆ. ಚಾಸಾ-4 ನನ್ನ ಹೆಂಡತಿ. ಚಾಸಾ-5 ರಿಂದ 8 ರವರ ಪರಿಚಯವಿದ.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿದ್ದು ನೋಡಿ ಗುರುತಿಸಿದ್ದು ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪೋಟೋ ತೋರಿಸಲಾಗಿದ್ದು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಲು ಮಾನ್ಯ ಸ.ಸ.ಅ. ಅವರು ಅನುಮತಿ ಕೋರಿದ್ದು, ಪರಿಶೀಲಿಸಿ ನೋಡಿ ಅನುಮತಿ ನೀಡಲಾಯಿತು)

**ವಾಟೀ ಸವಾಲುಃ ಸ.ಸ.ಅ. ಅವರಿಂದಃ**

ದಿಃ 11-01-2018 ರಂದು ಸಾಯಂಕಾಲ 5-00 ಗಂಟೆಗೆ ನನಗೆ ಸೇರಿದ ಜಮೀನು ಸರ್ವೆ ನಂ. 550/5 ರಲ್ಲಿ ಆರೋಪಿತರೆಲ್ಲರೂ ಅಕ್ರಮವಾಗಿ ಕೂಡಿಕೊಂಡು ಬಂದು ಪೋಟ ಖರಾಬ ಜಾಗೆಯ ಇದ್ದ ಕಬ್ಜಾ ವಹಿವಾಟ ಸಲುವಾಗಿ ತಂಟೆಯ ಸಿಟ್ಟಿನಿಂದ ನಾನು 1 ಮತ್ತು 2 ನೇ ಆರೋಪಿತರಿಗೆ ಸದರಿ ಜಮೀನನಲ್ಲಿರುವ ಸೀಮೆಯ ಕಲ್ಲನ್ನು ಏಕೆ ಕಿತ್ತಿರುವಿರೀ ಎಂದು ಕೇಳಿದ್ದೇ ಎಂದರೆ ಸರಿಯಲ್ಲ. ಅದಕ್ಕೆ ಆರೋಪಿತರು ಸೀಮೆ ಕಲ್ಲನ್ನು ನಾವು ಕಿತ್ತಿರುವುದಿಲ್ಲಾ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. 3 ಮತ್ತು 4 ನೇ ಆರೋಪಿತರು ಈ ಹಾಟ್ಯಾಂದು ಬಾಳ ಆಗಿದೆ ಬಡಿರಿ ಇವನ್ ಎಂದರು ಎಂದರೆ ಸರಿಯಲ್ಲ. 3 ನೇ ಆರೋಪಿ ಒಂದು ಕಲ್ಲಿನಿಂದ ನನಗೆ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. 1 ನೇ ಆರೋಪಿ ಸಲಿಕೆಯಿಂದ ನನ್ನ ಎರಡು ಕಾಲಿನ ಮೊಣಕಾಲು ಪಕ್ಕಕ್ಕೆ ಬಡಿದರು ಎಂದರೆ ಸರಿಯಲ್ಲ. 2 ನೇ ಆರೋಪಿ ಬಡಿಗೆಯಿಂದ ನನ್ನ ಎರಡು ಕಾಲು ತೊಡೆಯ ಮೇಲೆ, ಗದ್ದಕ್ಕೆ, ಕಪಾಳಕ್ಕೆ, ತಲೆಗೆ ಬಡೆದರು ಎಂದರೆ ಸರಿಯಲ್ಲ. 4 ನೇ ಆರೋಪಿ ಬಡಿಗೆಯಿಂದ ನನ್ನ ಬೆನ್ನಿಗೆ, ತಲೆಗೆ ಬಡೆದರು ಎಂದರೆ ಸರಿಯಲ್ಲ. ಎಲ್ಲಾ ಆರೋಪಿತರು ಕೂಡಿಕೊಂಡು ನನಗೆ ಜೀವದ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ.

ಸಾಕ್ಷಿಗೆ ದಿಃ 14-01-2018 ರ ಮರು ಹೇಳಿಕೆಯನ್ನು ಓದಿ ಹೇಳಲಾಗಿದ್ದು ನಿರಾಕರಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ</u>** --ಇಲ್ಲಾ --

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

**ಸಹಿ/-**
**(ಶ್ರೀ. ಅಭಿನಯ)**
**ಹೆ.ದಿ.&ನ್ಯಾ .ದಂ.,ಗೋಕಾಕ.**